ಕ್ಷಣಕಾಲ ಮೊಬೈಲ್ ಸಂಪರ್ಕಿಸಲು ಯತ್ನಿಸುತ್ತಿರುವ ಜಗತ್ತಿನತ್ತವೇ ಅವಳ ಲಕ್ಷ್ಯವಿದ್ದದ್ದರಿಂದ ಇತ್ತ ಬಾಬಣ್ಣನ ಡೊಳ್ಳು ತನ್ನ ನಿತಂಬವನ್ನು ಉಜ್ಜುತ್ತಿರುವುದು ಗಮನಕ್ಕೇ ಬರಲಿಲ್ಲ. ಅವನ ಬಿಸಿ ಉಸಿರಲ್ಲಿ ಉದ್ವಿಗ್ನತೆ ಇತ್ತು. ಮೊಬೈಲ್ ಹಿಡಿದ ಕೈಗಳು ಅವಳ ಭುಜವನ್ನು ಬಳಸಿದ್ದವು. ಹಾವು ತುಳಿದಂತೆ ಜಿಗಿದಳು. ಯಾವ ಮಾಯೆಯಲ್ಲಿ ಒಂದೇ ಉಸಿರಿಗೆ ಮನೆಗೆ ಬಂದಳೊ ತಿಳಿಯದು. ಬುಲೆಟ್ ಹಿಡಿದ ಬಾಬಣ್ಣನ ಮುಖಕ್ಕೆ ರಾಚುವಂತೆ ಬಾಗಿಲ ಮುಚ್ಚಿದಳು. ಒಳಗಿಂದ ದೀಪ ಹಿಡಿದು ಬಂದ ಸಂಪದ, “ಸಿಗ್ನಲ್ ಸಿಕ್ಕಿದಿಲ್ಲೆ” ಎಂದದ್ದಕ್ಕೆ ತಲೆ ಅಲ್ಲಾಡಿಸಿದಳು.

★★★

ಹರಿಗದ್ದೆಯ ಮಾಲತಿ ಜಮೀನು ಮಾರುವ ಸುದ್ದಿ ಮಂಚಿಕೇರಿಯ ಪೇಟೆಯಲ್ಲಿ ಗುಲ್ಲಾಗಿ ಸದಾನಂದನ ಕಿವಿಗೂ ಬಿತ್ತು. ಬೆಂಗಳೂರಿನಲ್ಲಿರುವ ಅವನ ಸ್ನೇಹಿತನೊಬ್ಬ, “ನಿನ್ನೂರ ಸಮೀಪ ಚಲೋ ಸಾಗುವಳಿ ಜಮೀನಿದ್ರೆ ಹೇಳು. ಅಲ್ಲಿಗೆ ಬಂದು ಉಳಿತೇನೆ” ಎಂದಿದ್ದ. ಸದಾನಂದನ ಮೂಲ ಊರು ಮಂಚಿಕೇರಿಯೇ. ಪೇಟೆಯ ಡಾಂಬರು ರಸ್ತೆಯಿಂದ ಕಾಣುವಷ್ಟು ಸನಿಹ ಅವನ ಪಿತ್ರಾರ್ಜಿತ ಗದ್ದೆತೋಟ ಇದೆ. ಕೇಂದ್ರ ಸರಕಾರದ ತೆರಿಗೆ ಇಲಾಖೆಯಲ್ಲಿದ್ದ ಅವನ ಅಪ್ಪ ದೇಶದಾದ್ಯಂತ ಸುತ್ತಾಡಿ ನಿವೃತ್ತಿಗೆ ಎರಡು ತಿಂಗಳಿರುವಾಗ ಕಾರು ಅಪಘಾತದಲ್ಲಿ ತೀರಿಕೊಂಡಿದ್ದ. ತಾಯಿಯೂ ಬದುಕಿರಲಿಲ್ಲ. ನಿವೃತ್ತಿಯ ನಂತರ ಮಂಚಿಕೇರಿಯ ಪೂರ್ವಿಕರ ಮನೆಗೆ ಬಂದು ಉಳಿಯಬೇಕೆಂಬ ತಂದೆಯ ಆಸೆಯನ್ನು ಸದಾನಂದ ಈಡೇರಿಸಲೆಂಬಂತೆ ಬೆಂಗಳೂರಿನಲ್ಲಿ ಹತ್ತು ವರ್ಷ ರಿಯಲ್ ಎಸ್ಟೇಟ್ ದಂಧೆ ಮಾಡಿ ಸಾಕೆನಿಸಿ ಮಂಚಿಕೇರಿಗೆ ವಾಪಸ್ಸಾದ.

ನಲವತ್ತರ ಗಡಿಯಲ್ಲಿರುವ ಸದಾನಂದನಿಗೆ ಮದುವೆಯಾಗಿರಲಿಲ್ಲ. ಹಳೆ ಮನೆಯನ್ನು ಕೆಡುವಿ ಅದೇ ಕಟ್ಟಿಗೆಯನ್ನು ಬಳಸಿ ಮನೆತನದ ಅದೇ ಸಾಂಪ್ರದಾಯಕ ವಾಸ್ತು ಶೈಲಿಯಲ್ಲಿ ಕಟ್ಟಿದ. ಕೋಟೆಯಂತಯೊ ವಾಡೆಯಂತಯೊ ಕಾಣುವ ಕರಿಗಲ್ಲಿನ ಸುಣ್ಣಬಣ್ಣವಿಲ್ಲದ ಗೋಡೆ; ದುಂಡನೆಯ ಎರಡು ಕಂಬಗಳ ಅಂಕಣದ ಜಗಲಿ; ನಡುವೆ ಸರಪಳಿಯ ತೂಗು ಮಂಚ; ಗೋಡೆಯ ಮೇಲೆ ಮಾಡರ್ನ್ ಪೇಯಿಂಟಿಗ್ ಚೌಕಟ್ಟುಗಳು; ಕಟಾಂಜನದ ಮೇಲೆ ಜನಪದ ಶೈಲಿಯ ಚಿತ್ರವಿರುವ ಬೋರಲು ಹಾಕಿದ ಕೆಮ್ಮಣ್ಣು ಸವರಿದ ಮಡಕೆಗಳು; ಅಟ್ಟಕ್ಕೆ ಹೋಗಲು ಮೂಲೆಯಲ್ಲಿರುವ ಏಣಿ; ಉರುವಲು ಹಚ್ಚಿಯೆ ಅಡಿಗೆ ಮಾಡಲು ಮಣ್ಣಿನ ಒಲೆ; ಮ್ಯಾಲಾರ ಬೀಸಲು ಒಳ್ಳು; ಸುತ್ತಲೂ ಹಂಚಿನ ಮಾಡುಗಳು; ಸೋಗೆ ಕೊಟ್ಟಿಗೆಯಲ್ಲಿ ಗಾಂವ್ಟಿ ಆಕಳು; ಅಂಗಳದ ಒಂದು ಪಕ್ಕ ಎತ್ತಿನ ಬಂಡಿಗಾಡಿ; ನಡುವೆ ತುಳಸಿ ಪೀಠ; ಮತ್ತೊಂದು ಪಕ್ಕ ಕೋಳಿ ಗೂಡು; ಜಗಲಿ ತೊಲೆಗೆ ನೇತು ಹಾಕಿದ ಕಂದೀಲು; ಸುತ್ತಲೂ ಚಿರೆಗಲ್ಲಿನ ಪಾಗಾರ; ಒಳಗೆ ಮಾವು, ತೆಂಗು, ಕೆಂಡಸಂಪಿಗೆ ಗಿಡಗಳು; ಹುಳಗಳು ಬಾಣದಂತೆ ಹಾರುವ ಜೇನು ಪೆಟ್ಟಿಗೆ; ದಣಪೆ ಸರಿಸಿದೊಡನೆಯೇ ಬೊಗಳುವ ನಾಯಿಗಳು. ಶಾಲೆಗೆ ಹೋಗುವ ದೂರದೂರಿನ ನಾಲ್ಕು ಹುಡುಗರನ್ನು ಮನೆಯಲ್ಲಿರಿಸಿಕೊಂಡಿದ್ದಾನೆ. ಏನೇನೊ ಕನಸಿದೆ ಅವನಿಗೆ. ಜತೆಗೆ ಗೆಳಯನಿದ್ದರೆ ಅನುಕೂಲ ಎಂದು ಆಸೆ. ಮಂಚಿಕೇರಿಯ ಒಂದಿಬ್ಬರನ್ನು ಹರಿಗದ್ದೆಯ ಬಗ್ಗೆ ವಿಚಾರಿಸಿದಾಗ, “ನೀವೇ ಅಲ್ಲಿಗೆ ಹೋಗಿ ಮುಖತಃ ಮಾತಾಡಿ ಬರೋದು ಒಳ್ಳೇದು, ಈ ಊರಿನ ರಾಜಕೀಯ ನಿಮಗೆ ಗೊತ್ತಿಲ್ಲ” ಎಂದರು. ಸದಾನಂದ ಹರಿಗದ್ದೆಯ ಮಣ್ಣು ರಸ್ತೆಯ ಮೇಲೆ ಕಾರು ಡ್ರೈವ್ ಮಾಡಿಕೊಂಡು ಹೊರಟ.

ಯಾವುದೊ ಕಾಲದಲ್ಲಿ ನಾಟಾ ಸಾಗಿಸಲು ಮಾಡಿದ್ದ ಮಣ್ಣು ರಸ್ತೆ ಇಕ್ಕಟ್ಟಾಗಿತ್ತು. ಕಾಡು